ಪ್ರಯೋಜನವೂ ಆಗಲಿಲ್ಲ. ಕೆಲ ದಿನಗಳ ನಂತರ ಆ ಬೋರ್ಡನ್ನೇ ಯಾರೋ ಕದ್ದುಕೊಂಡು ಹೋದದ್ದೂ ಆಯಿತು. ಯಾವುದೋ ಕಾಲಕ್ಕೆ ಸೈಟು ತೆಗೆದುಕೊಂಡ ಪಾರ್ಟಿ ಹೆಚ್ಚಾಗಿ ಫಾರೆನ್ನಿನಲ್ಲೋ ಹೊರ ಊರಿನಲ್ಲೋ ಇದ್ದಾನೆ ಎಂಬುದು ಖಚಿತವಾಗಿತ್ತು ಈತನಿಗೆ. ಯಾವುದೇ ವಾರಸುದಾರರಿಲ್ಲದ ಸೈಟು ಎನ್ನುವ ಕೆಟಗರಿಗೆ ಅದನ್ನು ಸೇರಿಸಿಯೂ ಆಯ್ತು ಆತ. ಆದರೆ ಏರಿಯಾದಲ್ಲೇ ದೊಡ್ಡ ಬ್ರೋಕರಾದವನಿಗೆ ತನ್ನ ಪಕ್ಕದಮನೆಯ ಸೈಟು ಯಾರದೆಂಬುದೇ ಗೊತ್ತಿಲ್ಲದಿದ್ದರೆ ಹೇಗೆ? ಹೀಗಾಗಿ ಆ ಸೈಟು ತನ್ನ ಕೈಯ್ಯಲ್ಲೇ ಇರುವುದೆಂದೂ, ಓನರು ತನಗೆ ತುಂಬಾ ಪರಿಚಯದವರೆಂದೂ, ಸದ್ಯ ಮಾರುವುದಿಲ್ಲವೆಂದೂ ಹೇಳುತ್ತಾ ಅಲೆಯುತ್ತಿದ್ದ.

ಅಂತಹ ದೂರಾಲೋಚನೆಯೇನೂ ಇಲ್ಲದಿದ್ದರೂ, ಆ ಸೈಟಿನಲ್ಲಿ ಒಂದಿಷ್ಟು ಹೂವಿನ ಗಿಡಗಳನ್ನು ನೆಡುವ ಆಲೋಚನೆ ಆತನ ಹೆಂಡತಿಯದು. ಮಾನಸಿಕವಾಗಿ ಹೆಚ್ಚೂ ಕಡಿಮೆ ಸೈಟು ತನ್ನದೆಯೇ ಎಂದುಕೊಂಡಿದ್ದ ಗೋವಿಂದರಾಯ ಮರುದಿನವೇ ಸೈಟಿಗೆ ಬೇಲಿಯನ್ನು ಹಾಕಿಸಿಬಿಟ್ಟ. ಹೂವಿನ ಗಿಡಗಳ ಜೊತೆಗೆ ಒಂದಿಷ್ಟು ಬಾಳೆಯ ಗಿಡಗಳೂ ಬೆಳೆದು ನಿಂತವು. ಪೇಟೆಯಿಂದ ತಂದ ಹಣ್ಣುಗಳಿಗಿಂತ ಆ ಗಿಡದ ಹಣ್ಣುಗಳು ಬಹಳೇ ರುಚಿ ಎನ್ನಿಸುತ್ತಿದ್ದವು ಆತನಿಗೆ.

ಹೀಗಿರುತ್ತಿರಲು, ಆ ಸೈಟಿನಲ್ಲಿ ಕಾರ್ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಳ್ಳುವ ವಿಚಾರ ಆತನಿಗೆ ಬಂದದ್ದು ಇತ್ತೀಚೆಗೆ.

ಗೋವಿಂದರಾಯನದು ದೊಡ್ಡ ಸಂಸಾರವೇನಲ್ಲ. ಒಬ್ಬನೇ ಮಗ ಪಿಯುಸಿಗೆ ಬಂದಿದ್ದ. ಆತನನ್ನು ಡಾಕ್ಟರು ಮಾಡಲೇಬೇಕೆಂಬ ಹಟ ಗೋವಿಂದರಾಯನ ಹೆಂಡತಿಯದು. ಬೆಳಿಗ್ಗೆ ಆರರಿಂದ ಒಂದು ಟ್ಯೂಷನ್ನು, ಕಾಲೇಜು ಮುಗಿಸಿ ಬಂದಮೇಲೆ ರಾತ್ರಿ ಒಂಬತ್ತರವರೆಗೆ ಮತ್ತೊಂದು ಟ್ಯೂಷನ್ನು. ಒಂದೊಂದು ಒಂದು ದಿಕ್ಕು. ದಿಕ್ಕು ನೋಡುತ್ತ ಕುಳಿತರೆ ಒಳ್ಳೆಯ ಕೋಚಿಂಗ್ ಸಿಗಬೇಕಲ್ಲ? ಓಡಾಟದಿಂದಲೇ ಆತ ಸುಸ್ತಾಗುತ್ತಿದ್ದ. ಈಕೆಯದೂ ಲೇಡೀಸ್ ಕ್ಲಬ್ಬು, ವಾಕರ್ಸ್ ಗ್ರುಪ್ಪು, ಕಿಟ್ಟಿ ಪಾರ್ಟಿ, ಅದು ಇದುಗಳೆನ್ನುತ್ತಾ ಮನೆಯ ಹೊರಗಡೆಯ ಓಡಾಟ ಜೋರಾಗಿಯೇ ಇತ್ತು. ಅದೃಷ್ಟವಶಾತ್ ಆಕೆಯ ತವರುಮನೆಯೂ ಬೆಂಗಳೂರಲ್ಲೇ ಇದ್ದುದರಿಂದ ಮನೆಯಲ್ಲಿ ಯಾರೂ ಇಲ್ಲವೆಂದಾಗ ಮಗ ಟ್ಯೂಷನ್ನು ಮುಗಿಸಿ ನೇರ ಅಲ್ಲಿಯೇ ಹೋಗಿರುತ್ತಿದ್ದ. ಒಮ್ಮೊಮ್ಮೆ ತಡರಾತ್ರಿ ಆತನನ್ನು ಅಲ್ಲಿಂದ ಕರೆತರುವ ಅನಿವಾರ್ಯತೆ ಉಂಟಾಗುತ್ತಿತ್ತು. ಹೀಗಾಗಿ ಅವರಿಗೆ ಇನ್ನೊಂದು ಕಾರು ಅತ್ಯವಶ್ಯಕವಾಗಿತ್ತು. ಗೋವಿಂದರಾಯನಿಗೆ ಕೂಡ ಈ ಹಳೇ ಮಾರುತಿ ಕಾರು ಬಿಟ್ಟು ತನ್ನ ಘನತೆಗೆ ತಕ್ಕ ಹೊಸ ಕಾರು ತೆಗೆದುಕೊಳ್ಳಬೇಕಿತ್ತು. ಹೀಗಾಗಿ ಹೊಸ ಸ್ಕಾರ್ಪಿಯೋ ಬಂತು. ಹಳೆಯ ಕಾರು ಹೆಂಡತಿ ಹಾಗೂ ಮಗನಿಗೆಂದಾಯಿತು. ಎರಡೆರಡು ಕಾರಿಡಲು ಮನೆಯಲ್ಲಿ ಜಾಗ ಬೇಕಲ್ಲ? ಹೀಗಾಗಿ ಪಕ್ಕದ ಸೈಟಿನ ಒಂದಿಷ್ಟು ಬಾಳೆಯ ಗಿಡಗಳನ್ನು ಕಡಿಸಿ, ನೆಲಕ್ಕೆ ದಪ್ಪ ಜಲ್ಲಿ ಕಾಂಕ್ರೀಟು ಹಾಕಿಸಿ ಕಾರು ನಿಲ್ಲಿಸುವ ವ್ಯವಸ್ಥೆ ಮಾಡಿಕೊಂಡಿದ್ದ. ತಿಂಗಳೊಪ್ಪತ್ತಿನಲ್ಲಿ ಅಲ್ಲೇ ಹಾಲೋ ಬ್ಲಾಕ್ ಗೋಡೆ ಕಟ್ಟಿ, ಮೇಲೆ ಶೀಟ್ ಹಾಕಿ ಕಾರ್ ಶೆಡ್ ಮಾಡುವ ಆಲೋಚನೆಯೂ ಇತ್ತು ಆತನದು.

★★★